**ಹಿರಿಯ ದಿವಾಣಿ ನ್ಯಾಯಾಧೀಶರು ಮತ್ತು ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳ ನ್ಯಾಯಾಲಯ, ಹೊನ್ನಾವರ**

**ಫೌಜುದಾರಿ ಪ್ರಕರಣ ಸಂಖ್ಯೆ : 94/2020**

**ಚಾ.ಸಾಃ 2, ಫ್ರಾ.ಸಾಃ 2**

| | |
|---|---|
| ಸಾಕ್ಷಿದಾರನ ಹೆಸರು | ಕೃಷ್ಣ ನಾಯ್ಕು |
| ತಂದೆಯ ಹೆಸರು | ನಾಗಪ್ಪ ನಾಯ್ಕು |
| ವಯಸ್ಸು | 65 ವರ್ಷಗಳು |
| ಉದ್ಯೋಗ | ತೋಟಕ ಕೆಲಸ |
| ವಾಸ್ತವ್ಯ | ಹೊದ್ಕೆಶಿರೂರು, ಕೆಕ್ಕಾರ |

**ಸಾಕ್ಷಿಯನ್ನು ದಿನಾಂಕಃ 15-09-2022 ರಂದು ಕರೆಸಿ ಪ್ರಮಾಣೀಕರಿಸಲಾಯಿತು.**

**ಮುಖ್ಯ ವಿಚಾರಣೆಃ ಎಪಿಪಿಯವರಿಂದ,**

ಸಾಕ್ಷಿಗೆ ಈ ಪ್ರಕರಣದ ಗುನ್ನೆ ಜಾಗೆ ಪಂಚನಾಮೆಯನ್ನು ತೋರಿಸಲಾಗಿ ಅದರ ಮೇಲಿನ ಒಂದು ಸಹಿಯನ್ನು ತನ್ನದು ಎಂದು ತಿಳಿಸಿದ್ದರಿಂದ ಪಂಚನಾಮೆಯನ್ನು ನಿಪಿ-5 ಮತ್ತು ಅದರ ಮೇಲಿನ ಸಾಕ್ಷಿ ಸಹಿಯನ್ನು ನಿಪಿ-5(ಎ) ಎಂದು ಗುರುತಿಸಲಾಯಿತು.

ಸಾಕ್ಷಿಗೆ ನಿಪಿ-2 ರಿಂದ 4ನ್ನು ತೋರಿಸಲಾಗಿ ಅವುಗಳನ್ನು ತನ್ನ ಇರುವಿಕೆಯನ್ನು ಒಪ್ಪಿಕೊಂಡಿರುತ್ತಾರೆ. ನಿಪಿ-5ರ ಮೇಲಿನ ಸಹಿಯನ್ನು ಕೆಕ್ಕಾರದ ಮನೆಯ ಬಳಿ ಪಂಚನಾಮೆ ಮಾಡಿದಾಗ ಸುಮಾರು 3 ವರ್ಷಗಳ ಹಿಂದೆ ಮಾಡಿರುತ್ತೇನೆ. ಸ್ಥಳಕ್ಕೆ ಪಿ.ಎಸ್.ಐ ಬಂದಿದ್ದರು. ನಾನು ಸಹಿ ಮಾಡಿದಾಗ ಸ್ಥಳದಲ್ಲಿ ಬಹಳ ಜನ ಇದ್ದರು. ಸ್ಥಳದಲ್ಲಿ ನಾನು ಇದ್ದಾಗ ಪೋಲಿಸರು ನನ್ನನ್ನು ಕರೆದು ಸಹಿಯನ್ನು ಪಡೆದಿರುತ್ತಾರೆ. ಸ್ಥಳದಲ್ಲಿ ಕಳ್ಳತನವಾಗಿದ್ದು ಜಾಗವನ್ನು ಮಾಲಿಕರು ತೋರಿಸಿರುತ್ತಾರೆ. ಮನೆಯಲ್ಲಿದ್ದ ಗೊಡ್ರೇಜ್ (ಅಲ್ಮೆರಾ) ವನ್ನು ಒಡೆಯಲಾಗಿತ್ತು. ಪೋಲಿಸರು ಬರೆದುಕೊಂಡು ಪಂಚನಾಮೆ ಮಾಡಿ ಹೋಗಿರುತ್ತಾರೆ.

**ಪಾಟೀ ಸವಾಲುಃ ಆರೋಪಿಗಳ ಪರ ವಕೀಲರಾದಃ ಶ್ರೀ ವಿಠ್ಠಲ ಎಂ. ಭಂಡಾರಿಯವರಿಂದಃ**

ಸ್ಥಳದ ಆಜುಬಾಜು ಜನರು ಮತ್ತು ಹೋಗಿ ಬರುವ ಜನರು ಅಲ್ಲಿ ಸೇರಿದ್ದರು. ನಾನು ವಿದ್ಯಾಭ್ಯಾಸ ಮಾಡಿರುವುದಿಲ್ಲ. ನಾನು ನಿಪಿ-5ರ ಮೇಲೆ ಸಹಿ ಮಾಡಿರುತ್ತೇನೆ. ನಿಪಿ-5ನ್ನು ಬರೆಯಲು ನಾನು ಮಾಹಿತಿ ನೀಡಿಲ್ಲ ಎಂದರೆ ಸರಿ. ಸ್ಥಳದಲ್ಲಿ ಹಾರೆ ಕಂಪೌಂಡ್ ಒಳಗೆ ಬಿದ್ದಿತ್ತು. ಅದನ್ನು ಪೋಲಿಸರು

ತೆಗೆದುಕೊಂಡು ಬಂದಿರುವುದಿಲ್ಲ. ನಿಪಿ–5 ರಲ್ಲಿ ಏನು ಬರೆದಿದೆ ಎನ್ನುವುದು ನನಗೆ ಗೊತ್ತಿಲ್ಲ ಎಂದರೆ ಸರಿ. ಪೋಲಿಸರು ಹೇಳಿದ್ದರಿಂದ ನಾನು ಸಹಿ ಮಾಡಿದ್ದೇನೆ ಎಂದರೆ ಸರಿ.

**ಮರುವಿಚಾರಣೆಃ ಇರುವುದಿಲ್ಲ.**

**(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯಂತೆ ಗಣಕೀಕೃತ ಮಾಡಿಸಲಾಯಿತು)**

ಓ.ಹೇ.ಕೇ. ಸರಿ ಇದೆ.

**ಹಿರಿಯ ದಿವಾಣಿ ನ್ಯಾಯಾಧೀಶರು ಮತ್ತು**
**ಪ್ರ.ದ.ನ್ಯಾದಂಡಾಧಿಕಾರಿಗಳು, ಹೊನ್ನಾವರ**